**5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಶಿವಮೊಗ್ಗ (ಪೀಠಾಸೀನ, ಸಾಗರ)**
**ಎಸ್.ಸಿ. ಸಂಃ 10042/2021**

ಪಿಡಬ್ಲೂ– 14

ಸಿಡಬ್ಲೂ–20

ಸಾಕ್ಷಿ ಹೆಸರು – ಅರವಿಂದ ಬಿ ಎಸ್

ತಂದೆ ಹೆಸರು – ಸೋಮಶೇಖರಪ್ಪ

ವಯಸ್ಸು – 37 ವರ್ಷ

ಉದ್ಯೋಗ – ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ,
ಜಿಲ್ಲಾ ವಿಶೇಷ ವಿಭಾಗ , ಜಿಲ್ಲಾ ಪೋಲೀಸ್ ಕಛೇರಿ
ದಾವಣಗೆರೆ

ವಾಸಃ – ದಾವಣಗೆರೆ

**ಪ್ರಮಾಣ ವಚನ ಭೋದಿಸಿದ ದಿನಾಂಕಃ 19–02–2026.**

**ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರವರಿಂದಃ**

ನಾನು ದಿನಾಂಕಃ 15–07–2019 ರಿಂದ 19–11–2020 ರ ವರೆಗೆ ಆನವಟ್ಟಿ ಪೋಲೀಸ್ ಠಾಣೆಯಲ್ಲಿ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ 19–05–2020 ರಂದು ಪ್ರಕರಣದ ಕಡತವನ್ನು ಚಾಸಾ–19 ರವರಿಂದ ಪಡೆದುಕೊಂಡು ತನಿಖೆಯನ್ನು ಮುಂದುವರೆಸಿರುತ್ತೇನೆ. ದೂರು ಮತ್ತು ಪ್ರಥಮ ವರ್ತಮಾನ ವರದಿಯ ವಿವರಗಳನ್ನು ಸಂಪೂರ್ಣವಾಗಿ ಓದಿ ತಿಳಿದುಕೊಂಡಿರುತ್ತೇನೆ. ಸದರಿ

ಪ್ರಕರಣದಲ್ಲಿ ಆರೋಪಿಯ ಪತ್ತೆಗಾಗಿ ಚಾಸಾ14 ಮತ್ತು 15 ರವರನ್ನು ನೇಮಕ ಮಾಡಿ ಕಳುಹಿಸಿರುತ್ತೇನೆ. ನಂತರ ಕೃತ್ಯ ನಡೆದ ಸ್ಥಳವಾದ ಆನವಟ್ಟಿ ಪೋಲೀಸ್ ಠಾಣೆಯ ಕಚವಿ ಗ್ರಾಮಕ್ಕೆ ಭೇಟಿ ನೀಡಿ, ಚಾಸಾ3 ಮತ್ತು 4 ರವರಿಗೆ ಪಂಚರಾಗಿ ಸಹಕರಿಸಬೇಕೆಂದು ಕೇಳಿಕೊಂಡು ಅವರಿಗೆ ಸಂಪೂರ್ಣ ವಿಚಾರವನ್ನು ತಿಳಿಸಿ ಚಾಸಾ–1 ಗಾಯಾಳುವಿನ ತಂದೆ ತೋರಿಸಿದ ಘಟನಾ ಸ್ಥಳವನ್ನು ಪರಿಶೀಲಿಸಿ ಖಚಿತಪಡಿಸಿಕೊಂಡು ಪಂಚರ ಸಮಕ್ಷಮದಲ್ಲಿ ಬೆಳಿಗ್ಗೆ 9–00 ಗಂಟೆಯಿಂದ 10 ಗಂಟೆಯವರೆಗೆ ಸ್ಥಳದಲ್ಲಿ ಮಹಜರ್ ಕ್ರಮ ಜರುಗಿಸಿ ಭಾವಚಿತ್ರಗಳನ್ನು ತೆಗೆದಿರುತ್ತೇನೆ. ಮಹಜರ್ ದಾಖಲೆಗೆ ಪಂಚರ ಸಹಿ ಪಡೆದುಕೊಂಡಿರುತ್ತೇನೆ. ಈಗ ತೋರಿಸಿದ ನಿಪಿ 4 ಪಂಚರಿಗೆ ನೀಡಿದ ನೋಟೀಸ್ ಆಗಿರುತ್ತದೆ. ಅದರಲ್ಲಿ ನನ್ನ ಸಹಿ ಇರುತ್ತದೆ. ಸಾಕ್ಷಿಯ ಸಹಿಯನ್ನು ನಿಪಿ 4(ಬಿ) ಎಂದು ಗುರುತಿಸಲಾಯಿತು. ಸ್ಥಳ ಪಂಚನಾಮೆಯನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ2 ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಹಿಯನ್ನು ನಿಪಿ2(ಸಿ) ಎಂದು ಗುರುತಿಸಲಾಯಿತು. ಈಗ ತೋರಿಸಿದ ನಿಪಿ3 ಸ್ಥಳ ಪಂಚನಾಮೆ ಸಮಯದಲ್ಲಿ ತೆಗೆದ ಭಾವಚಿತ್ರ ಆಗಿರುತ್ತದೆ. ಸ್ಥಳದಲ್ಲಿ ಹಾಜರಿದ್ದಂತಹ ಚಾಸಾ5 ಮತ್ತು 6 ರವರನ್ನು ವಿಚಾರಣೆ ಮಾಡಿ ಅವರ ಹೇಳಿಕೆಗಳನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಚಾಸಾ6 ರವರು ನನ್ನ ಮುಂದೆ ನಿಪಿ –8 ರಂತೆ ಹೇಳಿಕೆ ನೀಡಿರುತ್ತಾರೆ. ಆರೋಪಿಯ ಪತ್ತೆ ಕಾರ್ಯಕ್ಕೆ ಹೋಗಿದ್ದಂತಹ

ಚಸಾ14 ಮತ್ತು 15 ರವರು ಬೆಳಿಗ್ಗೆ 11 ಗಂಟೆಗೆ ಆರೋಪಿತನನ್ನು ಬಂಕಸಾಣ ಗ್ರಾಮದಿಂದ ಪತ್ತೆ ಮಾಡಿಕೊಂಡು ಬಂದು ನನ್ನ ಮುಂದೆ ಹಾಜರುಪಡಿಸಿರುತ್ತಾರೆ. ಆರೋಪಿತನ ಹೆಸರು, ವಿಳಾಸ ಪೂರ್ವಾಪರಗಳನ್ನು ವಿಚಾರಿಸಿ ಆತನಿಂದ ಘಟನೆಯಲ್ಲಿ ಭಾಗಿಯಾದ ಬಗ್ಗೆ ಮತ್ತು ಹಲ್ಲೆ ಮಾಡಿದ ಬಗ್ಗೆ, ಹಲ್ಲೆಗೆ ಬಳಸಿದ್ದ ದೊಣ್ಣೆಯನ್ನು ತೋರಿಸುವ ಬಗ್ಗೆ, ಸ್ವ – ಇಚ್ಛಾ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ.

ಆರೋಪಿ ತನ್ನ ಸ್ವ – ಇಚ್ಛಾ ಹೇಳಿಕೆಯಲ್ಲಿ ನೀವು ನನ್ನನ್ನು ಕರೆದುಕೊಂಡು ಹೋದರೆ ನಾನು ಬಿಸಾಡಿದ ದೊಣ್ಣೆಯನ್ನು ತೋರಿಸುತ್ತೇನೆ ಎಂದು ಹೇಳಿರುತ್ತಾನೆ. ಆರೋಪಿಯ ಸದರಿ ಹೇಳಿಕೆಯ ಭಾಗವನ್ನು ನಿಪಿ – 17 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ 17(ಎ) ಎಂದು ಗುರುತಿಸಲಾಯಿತು. ಆರೋಪಿಯ ಸಹಿಯನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ಗುರುತಿಸಿದ ಆರೋಪಿಯ ಸಹಿಯನ್ನು ನಿಪಿ 17(ಬಿ) ಎಂದು ಗುರುತಿಸಲಾಯಿತು.

ನಂತರ ಆರೋಪಿಯನ್ನು ಬೆಂಗಾವಲು ಸಿಬ್ಬಂದಿಯೊಂದಿಗೆ ಇಲಾಖೆಯ ಜೀಪ್ ನಲ್ಲಿ ಕೂರಿಸಿಕೊಂಡಿದ್ದು, ಆರೋಪಿಯೇ ನಮ್ಮನ್ನು ಮತ್ತು ಪಂಚರನ್ನು ಕಚವಿ ಗ್ರಾಮಕ್ಕೆ

ಕರೆದುಕೊಂಡು ಹೋಗಿ ವಾಹನದಿಂದ ಕೆಳಗೆ ಇಳಿದು ಇದೇ ತಾನು ಮಲ್ಲಿಕಾರ್ಜುನನಿಗೆ ಹಲ್ಲೆ ಮಾಡಿದ ಜಾಗ ಎಂದು ತೋರಿಸಿದ್ದು, ಸದರಿ ಸ್ಥಳ ಸ.ನಂಃ 6 ಆಗಿರುತ್ತದೆ. ನಂತರ ಆರೋಪಿ ಮುಂದೆ ಕರೆದುಕೊಂಡು ಹೋಗಿ, ಸದರಿ ಸ್ಥಳದಲ್ಲಿ ಬಿದ್ದಿದ್ದ 3–4 ಅಡಿ ಉದ್ದದ ಒಂದು ಹಿಡಿ ಗಾತ್ರದ ದೊಣ್ಣೆಯನ್ನು ತೆಗೆದು ನನ್ನ ಮುಂದೆ ಹಾಜರುಪಡಿಸಿ, ತಾನು ಮಲ್ಲಿಕಾರ್ಜುನನಿಗೆ ಹಲ್ಲೆ ಮಾಡಲು ಬಳಸಿದ ದೊಣ್ಣೆ ಯಾಗಿರುತ್ತದೆ ಎಂದು ಹೇಳಿದ್ದು, ನಂತರ ಸದರಿ ದೊಣ್ಣೆಯನ್ನು ಪಂಚರ ಸಮಕ್ಷಮ ಮದ್ಯಾಹ್ನ 12–30 ಗಂಟೆಯಿಂದ 1–30 ಗಂಟೆ ವರೆಗೆ ಅಮಾನತ್ತು ಪಂಚನಾಮೆ ಮಾಡಿ ಅಮಾನತ್ತುಪಡಿಸಿಕೊಂಡಿರುತ್ತೇನೆ. ಅಮಾನತ್ತು ಪಂಚನಾಮೆ ಸಮಯದಲ್ಲಿ ಭಾವಚಿತ್ರಗಳನ್ನು ತೆಗೆದಿರುತ್ತೇನೆ. ಮತ್ತು ಅಮಾನತ್ತು ಪಂಚನಾಮೆ ದಾಖಲೆಗೆ ಪಂಚರ ಸಹಿ ಪಡೆದುಕೊಂಡಿರುತ್ತೇನೆ. ಈಗ ತೋರಿಸಿದ ನಿಪಿ 5 ಸದರಿ ಅಮಾನತ್ತು ಪಂಚನಾಮೆಯಾಗಿರುತ್ತದೆ. ಅದರಲ್ಲಿ ನನ್ನ ಸಹಿ ಇರುತ್ತದೆ. ಸಾಕ್ಷಿಯ ಸಹಿಯನ್ನು ನಿಪಿ –5(ಬಿ) ಎಂದು ಗುರುತಿಸಲಾಯಿತು. ಈಗ ತೋರಿಸಿದ ನಿಪಿ 6 ಮತ್ತು ನಿಪಿ7 ಅಮಾನತ್ತು ಪಂಚನಾಮೆ ಸಮಯದಲ್ಲಿ ತೆಗೆದ ಭಾವಚಿತ್ರಗಳಾಗಿರುತ್ತವೆ.

ನಂತರ ಘಟನಾ ಸ್ಥಳದಿಂದ ಆರೋಪಿ ಮತ್ತು ಅಮಾನತ್ತುಪಡಿಸಿಕೊಂಡ ದೊಣ್ಣೆಯೊಂದಿಗೆ ಠಾಣೆಗೆ ಬಂದು ಮಧ್ಯಾಹ್ನ 2 ಗಂಟೆಗೆ ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ ಆರೋಪಿಯ ದಸ್ತಗಿರಿ ಕ್ರಮ ಜರುಗಿಸಿ ವೈದ್ಯಕೀಯ ಪರೀಕ್ಷೆ ಮಾಡಿಸಿ , ಆರೋಪಿಯನ್ನು ರಿಮ್ಯಾಂಡ್ ಅರ್ಜಿಯೊಂದಿಗೆ ಮಾನ್ಯ ನ್ಯಾಯಾಧೀಶರ ಮುಂದೆ ಹಾಜರುಪಡಿಸಿರುತ್ತೇನೆ. ನಂತರ ಅಮಾನತ್ತುಪಡಿಸಿಕೊಂಡ ದೊಣ್ಣೆಯನ್ನು ಠಾಣಾ ಮಾಲುಪಟ್ಟಿ ಸಂಃ 55/2020 ರಲ್ಲಿ ಅಳವಡಿಸಿಕೊಂಡಿರುತ್ತೇನೆ. ದೊಣ್ಣೆಯನ್ನು ನೋಡಿದರೆ ಗುರುತಿಸಬಲ್ಲೆ. ಅದನ್ನು ಈಗ ನೋಡುತ್ತಿದ್ದು , ಅದನ್ನು ಈಗಾಗಲೇ ಮು ಮಾ -1 ಎಂದು ಗುರುತಿಸಲಾಗಿದೆ. ಆರೋಪಿಯನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ವ್ಯಕ್ತಿಯನ್ನು ನೋಡಿ ಅವರೇ ಆರೋಪಿ ಎಂದು ಗುರುತಿಸಿರುತ್ತಾರೆ.

ದಿನಾಂಕಃ 27-05-2020 ರಂದು ತನಿಖೆಯನ್ನು ಮುಂದುವರೆಸಿ ಪ್ರಕರಣದ ಸಾಕ್ಷಿದಾರರಾದ ಚಾಸಾ7 ರಿಂದ ಚಾಸಾ 13 ರವರನ್ನು ವಿಚಾರಣೆ ಮಾಡಿ, ಅವರ ಹೇಳಿಕೆಗಳನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಚಾಸಾ7 ರವರು ನಿಪಿ 9 ರಂತೆ ನನ್ನ ಮುಂದೆ ಹೇಳಿಕೆ ನೀಡಿರುತ್ತಾರೆ.

ದಿನಾಂಕಃ 01–07–2020 ರಂದು ತನಿಖೆಯನ್ನು ಮುಂದುವರೆಸಿ ಪ್ರಕರಣದ ಗಾಯಾಳುವಾದ ಚಸಾ2 ಮತ್ತು ಚಾಸಾ13 ರವರ ವಿಚಾರಣೆ ಮಾಡಿ ಹೇಳಿಕೆಗಳನ್ನು ಪಡೆದುಕೊಂಡು ಕಡತದಲ್ಲಿ ಅಳವಡಿಸಿಕೊಂಡಿರುತ್ತೇನೆ. ದಿನಾಂಕಃ 04–07–2020 ರಂದು ಚಾಸಾ 18 ಡಾಃ ಹರ್ಷರವರು ನೀಡಿದ ಗಾಯದ ಪ್ರಮಾಣಪತ್ರವನ್ನು ಪಡೆದುಕೊಂಡು ಕಡತದಲ್ಲಿ ಅಳವಡಿಸಿಕೊಂಡಿರುತ್ತೇನೆ. ಈಗ ತೋರಿಸಿದ ನಿಪಿ –10 ಸದರಿ ಗಾಯದ ಪ್ರಮಾಣಪತ್ರ ಆಗಿರುತ್ತದೆ. ಅದರಲ್ಲಿ ನನ್ನ ಸಹಿ ಇರುತ್ತದೆ. ಸಾಕ್ಷಿಯ ಸ್ವೀಕೃತ ಸಹಿಯನ್ನು ನಿಪಿ –10 (ಬಿ) ಎಂದು ಗುರುತಿಸಲಾಯಿತು. ದಿನಾಂಕಃ 19–11–2020 ರಂದು ನನಗೆ ವರ್ಗಾವಣೆ ಆಗಿದ್ದರಿಂದ, ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ21 ರವರಿಗೆ ಹಸ್ತಾಂತರ ಮಾಡಿರುತ್ತೇನೆ.

**ಪಾಟೀ ಸವಾಲುಃ ಆರೋಪಿತನ ಪರ ಶ್ರೀ ಹೆಚ್ ಎನ್ ಡಿ ವಕೀಲರಿಂದಃ**

ನಾನು ಈ ಪ್ರಕರಣದಲ್ಲಿ ಭಾಗಶಃ ತನಿಖೆಯನ್ನು ಮಾಡಿರುತ್ತೇನೆ ಎಂದರೆ ಸರಿ. ದಿನಾಂಕಃ 19–05–2020 ರಂದು ಬೆಳಿಗ್ಗೆ 6–00 ಗಂಟೆಗೆ ಈ ಪ್ರಕರಣದ ಕಡತವನ್ನು ಪಡೆದುಕೊಂಡು ತನಿಖೆಯನ್ನು ಮುಂದುವರೆಸಿರುತ್ತೇನೆ. ಚಾಸಾ–19 ರವರು ಪ್ರಕರಣ ದಾಖಲು ಮಾಡುವ ಪೂರ್ವದಲ್ಲಿ ನನಗೆ ಕರೆ ಮಾಡಿ ವಿಚಾರ ತಿಳಿಸಿರುತ್ತಾರೆ. ಚಸಾ19

ರವರು ನನಗೆ ಯಾವ ಸಮಯದಲ್ಲಿ ಕರೆ ಮಾಡಿದರು ಎಂದು ನನಗೆ ಈಗ ನೆನಪಿಲ್ಲ. ಆ ಸಮಯದಲ್ಲಿ ಕೋವಿಡ್ ಇದ್ದಿದ್ದರಿಂದ ಚಾಸಾ19 ರವರು ನನಗೆ ಕರೆ ಮಾಡಿದ ತಕ್ಷಣ ನನಗೆ ಠಾಣೆಗೆ ಹೋಗಲು ಆಗಿರುವುದಿಲ್ಲ. ಆ ಬಗ್ಗೆ ನಾನು ದಿನಚರಿಯಲ್ಲಿ ನಮೂದು ಮಾಡಿರುವುದಿಲ್ಲ. ನಾನು ಎಫ್ ಐ ಆರ್ ದಾಖಲಾದ ಮೇಲೆ ಠಾಣೆಗೆ ಹೋಗಿರುತ್ತೇನೆ, ಸಮಯ ನೆನಪಿಲ್ಲ. ಎಫ್ ಐ ಆರ್ ದಿನಾಂಕಃ18–05–2020 ರಂದು ಸಂಜೆ 7 ಗಂಟೆಗೆ ದಾಖಲಾಗಿರುತ್ತದೆ. ಆ ಸಮಯದಲ್ಲಿ ಗಾಯಾಳು ಹೆಚ್ಚಿನ ಚಿಕಿತ್ಸೆಗಾಗಿ ಶಿವಮೊಗ್ಗದ ಆಸ್ಪತ್ರೆಗೆ ಹೋಗಿರುತ್ತಾನೆ. ಎಫ್ ಐ ಆರ್ ದಾಖಲಾದ ಮೇಲೆ ನಾನು ಠಾಣೆಗೆ ರಾತ್ರಿ ಸುಮಾರು 8.00 ಗಂಟೆಗೆ ಬಂದಿರುತ್ತೇನೆ. ದಿನಾಂಕಃ 18–05–2020 ರಂದು ಸಂಜೆ ಗಾಯಾಳು ಶಿವಮೊಗ್ಗದ ಮ್ಯಾಕ್ಸ್ ಆಸ್ಪತ್ರೆಗೆ ಹೋಗಿ ಚಿಕಿತ್ಸೆಯನ್ನು ಪಡೆದುಕೊಂಡಿರುತ್ತಾರೆ. ಗಾಯಾಳು ಶಿವಮೊಗ್ಗದ ಮ್ಯಾಕ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿರುತ್ತಾರೆ. ಸಾಕ್ಷಿ ಮುಂದುವರೆದು ಗಾಯಾಳುವನ್ನು ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಆದರೆ ಸದರಿ ಆಸ್ಪತ್ರೆಯಲ್ಲಿ ಗಾಯಾಳುವಿಗೆ ಯಾವುದೇ ಚಿಕಿತ್ಸೆಯನ್ನು ನೀಡಿರುವುದಿಲ್ಲ. ಗಾಯಾಳು ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ಹೋಗಿರುವ ಬಗ್ಗೆ ಯಾವುದೇ ದಾಖಲೆ ಇರುವುದಿಲ್ಲ. ಯಾವುದೇ ಗಾಯಾಳು ಆಸ್ಪತ್ರೆಗೆ ಹೋದರೆ ಎಂ ಎಲ್ ಸಿ ಮಾಡಿ ಹೆಚ್ ಎಂ ಆರ್ ಅನ್ನು ಠಾಣೆಗೆ ಕಳುಹಿಸಿಕೊಡುತ್ತಾರೆ ಎಂದರೆ ಸರಿ. ಗಾಯಾಳು ಮೊದಲು ಆನವಟ್ಟಿ

ಆಸ್ಪತ್ರೆಗೆ ಹೋಗಿರುತ್ತಾರೆ. ಅಲ್ಲಿನ ವೈಧ್ಯರು ಗಾಯಾಳುವನ್ನು ಶಿಕಾರಿಪುರ ಸರ್ಕಾರಿ ಆಸ್ಪತ್ರೆಗೆ ಕಳುಹಿಸಿರುತ್ತಾರೆ. ನಂತರ ಸದರಿ ಆಸ್ಪತ್ರೆಯಲ್ಲಿ ಆಗುವುದಿಲ್ಲ ಎಂದು ಗಾಯಾಳುವನ್ನು ಶಿವಮೊಗ್ಗದ ಆಸ್ಪತ್ರೆಗೆ ಕಳುಹಿಸಿಕೊಟ್ಟಿರುತ್ತಾರೆ. ಸಾಮಾನ್ಯವಾಗಿ ವೈಧ್ಯರು ಗಾಯಾಳುವನ್ನು ಹೆಚ್ಚಿನ ಚಿಕಿತ್ಸೆಗಾಗಿ ಬೇರೆ ಆಸ್ಪತ್ರೆಗೆ ಕಳುಹಿಸುವ ಸಂದರ್ಭದಲ್ಲಿ ರೆಫರಲ್ ಲೆಟರ್ ಕೊಡುತ್ತಾರೆ ಎಂದರೆ ಸಾಕ್ಷಿ ಎಲ್ಲಾ ಪ್ರಕರಣದಲ್ಲೂ ಆ ರೀತಿ ಕೊಡುವುದಿಲ್ಲ ಎಂದು ಹೇಳುತ್ತಾರೆ. ನಮ್ಮ ಪೋಲೀಸ್ ಠಾಣೆಗೆ ಮೂರು ಆಸ್ಪತ್ರೆಗಳಿಂದ ಹೆಚ್ ಎಂ ಆರ್ ಬಂದಿರುವುದಿಲ್ಲ. ನಾನು ಗಾಯಾಳುವನ್ನು ನೋಡಲು ಆನವಟ್ಟಿ ಆಸ್ಪತ್ರೆಗೆ ಹೋಗಿರುವುದಿಲ್ಲ. ಆದರೆ ನಾನು ಮ್ಯಾಕ್ಸ್ ಆಸ್ಪತ್ರೆಗೆ ಹೋಗಿ ಗಾಯಾಳುವನ್ನು ನೋಡಿರುತ್ತೇನೆ. ಆರೋಪಿಯ ವಿರುದ್ಧ ಕಲಂ 307 ಐ ಪಿ ಸಿ ಅಡಿಯಲ್ಲಿ ಎಫ್ ಐ ಆರ್ ದಾಖಲಾಗುವ ಪೂರ್ವದಲ್ಲಿ ನಾನು ಯಾವುದಾದರೂ ಸಿಬ್ಬಂದಿಯನ್ನು ಆಸ್ಪತ್ರೆಗೆ ಕಳುಹಿಸಿ ಗಾಯಾಳುವಿನ ಸ್ಥಿತಿಗತಿಯನ್ನು ಪರಿಶೀಲನೆ ಮಾಡಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ಎಫ್ ಐ ಆರ್ ದಾಖಲಾದ ಮೇಲೆ ನಮ್ಮ ಠಾಣೆಗೆ ಮೂರು ಆಸ್ಪತ್ರೆಗಳಿಂದ ಹೆಚ್ ಎಂ ಆರ್ ಬಂದಿರುವುದಿಲ್ಲ.

ಎಫ್ ಐ ಆರ್ ದಾಖಲಾದ 2 ದಿವಸದ ನಂತರ ಮ್ಯಾಕ್ಸ್ ಆಸ್ಪತ್ರೆಗೆ ಹೋಗಿ ಗಾಯಾಳುವನ್ನು ನೋಡಿರುತ್ತೇನೆ. ಆದರೆ ನನಗೆ ಈಗ ದಿನಾಂಕ ಮತ್ತು ಸಮಯ ನೆನಪಿಲ್ಲ. ನಾನು ಮ್ಯಾಕ್ಸ್ ಆಸ್ಪತ್ರೆಗೆ ಹೋದಾಗ ಗಾಯಾಳು ಅಥವಾ ಅವರ ಸಂಬಂಧಿಕರ ಹೇಳಿಕೆಯನ್ನು ಪಡೆದುಕೊಂಡಿರಲಿಲ್ಲ. ಸಾಕ್ಷಿ ಆ ಸಮಯದಲ್ಲಿ ಗಾಯಾಳುವಿಗೆ ಪ್ರಜ್ಞೆ ಇರಲಿಲ್ಲ, ಆತ ಹೇಳಿಕೆ ಕೊಡುವ ಸ್ಥಿತಿಯಲ್ಲಿ ಇರಲಿಲ್ಲ ಎಂದು ಹೇಳುತ್ತಾರೆ. ಆ ಬಗ್ಗೆ ನಾನು ವೈಧ್ಯರನ್ನು ವಿಚಾರಿಸಿರುತ್ತೇನೆ. ಆದರೆ ವೈಧ್ಯರಿಂದ ಯಾವುದೇ ಹೇಳಿಕೆ ಪಡೆದುಕೊಂಡಿರುವುದಿಲ್ಲ. ವೈಧ್ಯರನ್ನು ವಿಚಾರಿಸಿದ ಬಗ್ಗೆ ನಾನು ಯಾವುದೇ ವರದಿಯನ್ನು ನೀಡಿರುವುದಿಲ್ಲ ಎಂದರೆ ಸರಿ. ನಾನು ಗಾಯಾಳುವನ್ನು ನೋಡಲು ಮ್ಯಾಕ್ಸ್ ಆಸ್ಪತ್ರೆಗೆ ಹೋಗಿರುವುದಿಲ್ಲ ಮತ್ತು ವೈಧ್ಯರನ್ನು ವಿಚಾರಿಸಿರುವುದಿಲ್ಲ, ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಆರೋಪಿ ಮತ್ತು ಗಾಯಾಳುವಿನ ನಡುವೆ ಯಾವ ಕಾರಣಕ್ಕಾಗಿ ಹಳೇ ದ್ವೇಷ ಇತ್ತು ಎಂದು ವಿಚಾರಣೆ ಮಾಡಿರುತ್ತೀರಾ ಎಂದರೆ ಸಾಕ್ಷಿ ಸಾಕ್ಷಿದಾರರು ಜಮೀನಿನಲ್ಲಿ ಓಡಾಡುವ ವಿಚಾರಕ್ಕೆ ಅವರಿಬ್ಬರ ನಡುವೆ ದ್ವೇಷ ಇತ್ತು ಎಂದು ಹೇಳಿರುತ್ತಾರೆ ಎಂದು ಹೇಳುತ್ತಾರೆ.

ಚಾಸಾ14 ಮತ್ತು 15 ರವರು ಆರೋಪಿಯನ್ನು ಬಂಕಸಾಣ ಗ್ರಾಮದಲ್ಲಿ ಬೆಳಿಗ್ಗೆ 10–00 ಗಂಟೆಗೆ ಬಂಧಿಸಿರುತ್ತಾರೆ. ಆರೋಪಿಯ ಸ್ವ – ಇಚ್ಛಾ ಹೇಳಿಕೆಯನ್ನು ದಿನಾಂಕಃ 19–05–2020 ರಂದು ಬೆಳಿಗ್ಗೆ 11 ರಿಂದ 11–30 ಗಂಟೆವರೆಗೆ ತೆಗೆದುಕೊಂಡಿರುತ್ತೇನೆ. ಆರೋಪಿಯ ಸ್ವ– ಇಚ್ಛಾ ಹೇಳಿಕೆಯಲ್ಲಿ ಸಮಯ ನಮೂದಾಗಿರುವುದಿಲ್ಲ ಮತ್ತು ಹೇಳಿಕೆಯನ್ನು ಯಾರು ಗಣಕೀಕೃತ ಮಾಡಿದರು ಎಂದು ನಮೂದಾಗಿರುವುದಿಲ್ಲ ಎಂದರೆ ಸರಿ.

ನಾನು ಸ್ಥಳ ಪಂಚನಾಮೆ ಮಾಡಲು ಸ್ಥಳಕ್ಕೆ ಬೆಳಿಗ್ಗೆ 8–00 ಗಂಟೆಗೆ ಹೋಗಿರುತ್ತೇನೆ. ಸ್ಥಳ ಪಂಚನಾಮೆ ಮಾಡಿದ ಸ್ಥಳ ಕೃಷಿ ಜಮೀನು ಎಂದರೆ ಸರಿ. ಸ್ಥಳ ಪಂಚನಾಮೆ ಸಮಯದಲ್ಲಿ ಜಮೀನಿನಲ್ಲಿ ಯಾವುದೇ ಬೆಳೆ ಇರಲಿಲ್ಲ ಕಟಾವು ಆಗಿತ್ತು. ಪಂಚರನ್ನು ಸ್ಥಳಕ್ಕೆ ನಮ್ಮ ಸಿಬ್ಬಂದಿಯವರು ಕರೆದುಕೊಂಡು ಬಂದಿರುತ್ತಾರೆ. ಸಿಬ್ಬಂದಿಯವರ ಹೆಸರು ನನಗೆ ಈಗ ನೆನಪಿಲ್ಲ. ಪಂಚರು ಸದರಿ ಜಮೀನಿನ ಅಕ್ಕಪಕ್ಕದವರಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಪಂಚರು ಅದೇ ಗ್ರಾಮದವರು ಎಂದು ಹೇಳುತ್ತಾರೆ. ನಾನು ಪಂಚರಿಗೆ ಸ್ಥಳಕ್ಕೆ ಬಂದ ಮೇಲೆ ನೋಟೀಸ್ ನ್ನು ಜಾರಿ ಮಾಡಿರುತ್ತೇನೆ ಎಂದರೆ ಸರಿ. ಸ್ಥಳ ಪಂಚನಾಮೆ ಮಾಡಿದ ಜಮೀನಿನ ಮಾಲೀಕರನ್ನು ಸ್ಥಳಕ್ಕೆ ಕರೆಸಿರಲಿಲ್ಲ. ಚಾಸಾ3 ಮತ್ತು ಚಾಸಾ4

ಚಾಸಾ1 ರವರ ಜಮೀನಿನಲ್ಲಿ ಕೆಲಸ ಮಾಡುವವರು ಎಂದರೆ ಸರಿಯಲ್ಲ. ಸ್ಥಳ ಪಂಚನಾಮೆ ಮಾಡಿದ ಸಮಯದಲ್ಲಿ ಭಾವಚಿತ್ರಗಳನ್ನು ತೆಗೆದಿರುವುದಿಲ್ಲ ಎಂದರೆ ಸರಿಯಲ್ಲ. ಸ್ಥಳದಲ್ಲಿ ಭಾವಚಿತ್ರ ತೆಗೆದ ಬಗ್ಗೆ ಮಹಜರ್ ದಾಖಲೆಯಲ್ಲಿ ಬರೆದಿರುವುದಿಲ್ಲ ಎಂದರೆ ಸರಿ. ಸಾಮಾನ್ಯವಾಗಿ ಘೋರ ಪ್ರಕರಣಗಳಲ್ಲಿ ಸ್ಥಳ ಪಂಚನಾಮೆ ಮಾಡುವಾಗ ಮತ್ತು ವಸ್ತುಗಳನ್ನು ಅಮಾನತ್ತುಪಡಿಸಿಕೊಳ್ಳುವಾಗ ಸೂಕ್ಷ್ಮವಾಗಿ ವಿಚಾರಣೆ ನಡೆಸಬೇಕು ಎಂದರೆ ಸರಿ. ಸದರಿ ಪ್ರಕರಣಗಳಲ್ಲಿ ಸೂಕ್ಷ್ಮವಾಗಿ ವಿಚಾರಣೆ ನಡೆಸಲು ಇಲಾಖೆಯಿಂದ ನಮಗೆ ಕ್ರೈಮ್ ಕಿಟ್ ಕೊಟ್ಟಿರುತ್ತಾರೆ ಎಂದರೆ ಸರಿ. ನಾನು ಕ್ರೈಮ್ ಕಿಟ್ ಅನ್ನು ಸ್ಥಳಕ್ಕೆ ತೆಗೆದುಕೊಂಡು ಹೋಗಿದ್ದಿರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ಸದರಿ ಪ್ರಕರಣಗಳಲ್ಲಿ ಸ್ಥಳ ಪಂಚನಾಮೆ ಮಾಡುವಾಗ ಕ್ರೈಮ್ ಟೇಪ್ ನ್ನು ಬಳಸಬೇಕು ಎಂದರೆ ಸರಿ. ಫಿಂಗರ್ ಪ್ರಿಂಟ್ ತಜ್ಞರನ್ನು ನಾನು ಸ್ಥಳಕ್ಕೆ ಕರೆಸಿರುವುದಿಲ್ಲ ಎಂದರೆ ಸರಿ. ನಾನು ಸ್ಥಳದಲ್ಲಿ ಯಾವುದೇ ಪಂಚನಾಮೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಅಮಾನತ್ತು ಪಂಚನಾಮೆ ಮಾಡಿದ್ದ ಸ್ಥಳದಿಂದ ನಮ್ಮ ಠಾಣೆಗೆ ಸುಮಾರು 5-6 ಕಿ ಮೀ ಆಗಬಹುದು. ಅಮಾನತ್ತು ಪಂಚನಾಮೆ ಮಾಡಲು ಮದ್ಯಾಹ್ನ 12 ಗಂಟೆಗೆ ಠಾಣೆಯಿಂದ ಹೊರಟು ಸ್ಥಳಕ್ಕೆ 12-15 ಗಂಟೆಗೆ ತಲುಪಿರುತ್ತೇವೆ. ಅಮಾನತ್ತು ಪಂಚನಾಮೆ ಮಾಡಲು ಸ್ಥಳಕ್ಕೆ ಗಾಯಾಳುವಿನ ತಂದೆ ಅಥವಾ ಸಹೋದರರನ್ನು ಕರೆದುಕೊಂಡು ಹೋಗಿರಲಿಲ್ಲ ಎಂದರೆ ಸರಿ. ಅಮಾನತ್ತು

ಪಂಚನಾಮೆ ಮಾಡಿದ ಸ್ಥಳದ ಜಮೀನಿನ ಮಾಲೀಕರನ್ನು ಸ್ಥಳಕ್ಕೆ ಕರೆಸಿರಲಿಲ್ಲ ಎಂದರೆ ಸರಿ. ಅಮಾನತ್ತು ಪಂಚನಾಮೆ ದಾಖಲೆಗೆ ಸಹಿ ಹಾಕಿದ ಪಂಚರು ಅಕ್ಕ-ಪಕ್ಕದ ಜಮೀನಿನವರಲ್ಲ ಎಂದರೆ ಸರಿ. ಎರಡೂ ಮಾಡುವ ಸಮಯದಲ್ಲಿ ಅಕ್ಕಪಕ್ಕದ ಜಮೀನಿನವರನ್ನು ಸ್ಥಳಕ್ಕೆ ಕರೆಸಿದ್ದಿರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ಅಮಾನತ್ತು ಪಂಚನಾಮೆ ಸಮಯದಲ್ಲಿ ಅಮಾನತ್ತುಪಡಿಸಿಕೊಂಡ ವಸ್ತು ಯಾವುದು ಎಂದರೆ ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಮುದ್ದೆ ಮಾಲು –1 ಎಂದು ಹೇಳುತ್ತಾರೆ. ದೊಣ್ಣೆ, ಬಿದಿರು,ಕಡ್ಡಿ, ಮರದ ತುಂಡು ಇವುಗಳು ಬೇರೆ ಬೇರೆ ಆಕಾರದಲ್ಲಿ ಇರುತ್ತವೆ ಎಂದರೆ ಸರಿ. ಮು ಮಾ –1 ದೊಣ್ಣೆಯಾಗಿರುತ್ತದೆ. ಗಾಯದ ಪ್ರಮಾಣಪತ್ರದಲ್ಲಿ ವೈಧ್ಯರು ಗಾಯಾಳುವಿಗೆ ಸ್ಟಿಕ್ ನಿಂದ ಹಲ್ಲೆ ಯಾಗಿರುತ್ತದೆ ಎಂದು ಬರೆದಿರುತ್ತಾರೆ ಎಂದರೆ ಸರಿ. ಮ್ಯಾಕ್ಸ್ ಆಸ್ಪತ್ರೆಯ ದಾಖಲೆಯಲ್ಲಿ ವುಡನ್ ಪೀಸ್ ಎಂದು ಬರೆದಿರುತ್ತಾರೆ ಎಂದರೆ ಸರಿ. ಗಾಯದ ಪ್ರಮಾಣಪತ್ರದಲ್ಲಿ ಮತ್ತು ಮ್ಯಾಕ್ಸ್ ಆಸ್ಪತ್ರೆಯ ದಾಖಲೆಗಳಲ್ಲಿ ಸ್ಟಿಕ್ ಮತ್ತು ವುಡನ್ ಪೀಸ್ ಎಂದು ನಮೂದಾದ ಬಗ್ಗೆ ವೈಧ್ಯರ ಬಳಿ ವಿಚಾರಿಸಿರುತ್ತೀರಾ ಎಂದರೆ ಸಾಕ್ಷಿ ಮುಂದಿನ ತನಿಖಾಧಿಕಾರಿ ವಿಚಾರಿಸಿರುತ್ತಾರೆ ಎಂದು ಹೇಳುತ್ತಾರೆ.

ನಿ ಪಿ 6 ಮತ್ತು 7 ಭಾವಚಿತ್ರಗಳಲ್ಲಿ ಆರೋಪಿ ಕೈಯ್ಯಲ್ಲಿರುವ ದೊಣ್ಣೆಯನ್ನೆ ಈ ಪ್ರಕರಣದಲ್ಲಿ ಅಮಾನತ್ತುಪಡಿಸಿಕೊಂಡ ದೊಣ್ಣೆಯಾಗಿರುತ್ತದೆ. ಮು ಮಾ –1 ದೊಣ್ಣೆಯಲ್ಲಿ ಗಂಟುಗಳು ಇರುವುದಿಲ್ಲ ಎಂದರೆ ಸರಿ. ಮು ಮಾ –1 ಮರದ ದೊಣ್ಣೆಯ ಒಂದು ತುದಿಯಲ್ಲಿ 2 ಮೊಳೆಗಳು ಇವೆ ಎಂದರೆ ಸರಿ. ಮು ಮಾ 1 ದೊಣ್ಣೆಯಲ್ಲಿ ಮೊಳೆಗಳು ಇವೆ ಎಂದು ಅಮಾನತ್ತು ಪಂಚನಾಮೆಯಲ್ಲಿ ಬರೆದಿರುವುದಿಲ್ಲ. ಅಮಾನತ್ತುಪಡಿಸಿಕೊಂಡಾಗ ಸಾಕ್ಷಿದಾರರಿಂದ ಚೀಟಿಯ ಮೇಲೆ ಸಹಿಯನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿ. ಮು ಮಾ 1 ರ ಮೇಲೆ ಪಂಚರು ಸಹಿ ಮಾಡಿದ ಚೀಟಿಯನ್ನು ಅಂಟಿಸಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಮುದ್ದೆ ಮಾಲು ಮೇಲೆ ಚೀಟಿಯನ್ನು ಅಂಟಿಸುವುದಿಲ್ಲ, ಪ್ಯಾಕ್ ಮೇಲೆ ಅಂಟಿಸುತ್ತೇವೆ ಎಂದು ಹೇಳುತ್ತಾರೆ. ಮು ಮಾ 1 ದೊಣ್ಣೆಯನ್ನು ಸ್ಥಳದಲ್ಲಿ ಬಟ್ಟೆಯಿಂದ ಪ್ಯಾಕ್ ಮಾಡಿರುತ್ತೇನೆ. ಅಮಾನತ್ತು ಪಂಚನಾಮೆಯಲ್ಲಿ ಪಂಚರ ಸಹಿ ಇರುವ ಚೀಟಿಯನ್ನು ಪ್ಯಾಕ್ ಮಾಡಿದ ಬಟ್ಟೆಯ ಮೇಲೆ ಅಂಟಿಸಿರುತ್ತೇವೆ ಎಂದು ನಮೂದು ಇರುವುದಿಲ್ಲ ಎಂದರೆ ಸರಿ. ಮು ಮಾ 1 ನ್ನು ಪ್ಯಾಕ್ ಮಾಡಿದ ಬಟ್ಟೆಯ ಮೇಲೆ ಪಂಚರ ಸಹಿ ಇರುವ ಚೀಟಿ ಇರುವುದಿಲ್ಲ ಎಂದರೆ ಸರಿ. ಸಾಮಾನ್ಯವಾಗಿ ಬಯಾಲಜಿಕಲ್ ಎವಿಡೆನ್ಸ್ ಇದ್ದರೆ ಮಾತ್ರ ಅರಗು ಹಾಕುತ್ತೇವೆ, ಬೇರೆ ವಸ್ತುಗಳಿಗೆ ಅರಗು ಹಾಕುವುದಿಲ್ಲ ಎಂದು ಹೇಳುತ್ತಾರೆ. ಸಾಮಾನ್ಯವಾಗಿ ಬಿದಿರು ದೊಣ್ಣೆ

ಆದರೆ ದೊಣ್ಣೆಯಲ್ಲಿ ಗಂಟು ಇರುತ್ತದೆ ಎಂದರೆ ಸರಿ. ನಿಪಿ 7 ರಲ್ಲಿ ಕಾಣುವ ದೊಣ್ಣೆ ಬಿದಿರಿನ ದೊಣ್ಣೆ ಎಂದರೆ ಸರಿಯಲ್ಲ. ನಿಪಿ 7 ರಲ್ಲಿ ಕಾಣುವ ದೊಣ್ಣೆ ಬಿದಿರಿನ ದೊಣ್ಣೆ ಎಂದು ಗೊತ್ತಿದ್ದರೂ ಸಹ, ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಮಾನತ್ತುಪಡಿಸಿಕೊಂಡ ದೊಣ್ಣೆಯನ್ನು ವೈಧ್ಯರ ಮುಂದೆ ಹಾಜರುಪಡಿಸಿ ಸದರಿ ದೊಣ್ಣೆಯಿಂದ ಹಲ್ಲೆ ಮಾಡಿದರೆ ಗಾಯದ ಪ್ರಮಾಣಪತ್ರದಲ್ಲಿ ಹೇಳಿರುವ ಗಾಯಗಳು ಆಗುತ್ತವೆ ಎಂದು ಅಭಿಪ್ರಾಯ ಪಡೆದುಕೊಂಡಿದ್ದೀರಾ ಎಂದರೆ ಸಾಕ್ಷಿ ನಾನು ಪಡೆದುಕೊಂಡಿರುವುದಿಲ್ಲ, ಮುಂದಿನ ತನಿಖಾಧಿಕಾರಿ ಪಡೆದುಕೊಂಡಿರುತ್ತಾರೆ ಎಂದು ಹೇಳುತ್ತಾರೆ. ಗಾಯಾಳು ಮುಂದೆ ಮುದೆ ಮಾಲು 1 ನ್ನು ಹಾಜರುಪಡಿಸಿ ಮು ಮಾ –1 ರಿಂದಲೇ ತನಗೆ ಹಲ್ಲೆಯಾಗಿದೆಯಾ ಎಂದು ವಿಚಾರಿಸಿರುವುದಿಲ್ಲ.

ಗಾಯಾಳು ತನ್ನ ಹೇಳಿಕೆಯಲ್ಲಿ ತಾನು ಟ್ರಾಕ್ಟರ್ ನಲ್ಲಿ ಹೋಗಬೇಕಾದರೆ ಆರೋಪಿ ತನ್ನನ್ನು ಅಡ್ಡಗಟ್ಟಿ ಹಲ್ಲೆ ಮಾಡಿರುತ್ತಾನೆ ಎಂದು ಹೇಳಿರುತ್ತಾರೆ, ತಾವು ತಮ್ಮ ತನಿಖೆಯ ಅವಧಿಯಲ್ಲಿ ಸದರಿ ಟ್ರಾಕ್ಟರ್ ನ್ನು ಅಮಾನತ್ತುಪಡಿಸಿಕೊಂಡಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ಗಾಯಾಳುವಿಗೆ ಟ್ರಾಕ್ಟರ್ ನ್ನು ಚಾಲನೆ ಮಾಡಲು ಡ್ರೈವಿಂಗ್ ಲೈಸನ್ಸ್ ಇತ್ತೋ ಇಲ್ಲವೋ ಎಂದು ನಾನು ತನಿಖೆ ಮಾಡಿರುವುದಿಲ್ಲ. ನಾನು ಸ್ಥಳಕ್ಕೆ ಪಂಚನಾಮೆ

ಮಾಡಲು ಹೋದಾಗ ಹಿಂದಿನ ದಿವಸ ಮಳೆ ಬಂದಿತ್ತೋ ಇಲ್ಲವೋ ಎಂದು ಪರಿಶೀಲನೆ ಮಾಡಿರುತ್ತೀರಾ ಎಂದರೆ ಸಾಕ್ಷಿ ನನಗೆ ನೆನಪಿಲ್ಲ ಎಂದು ಹೇಳುತ್ತಾರೆ.

ಸ್ಥಳ ಪಂಚನಾಮೆ ಮಾಡಿದಂತಹ ಸ್ಥಳದಲ್ಲಿ ಯಾವುದೇ ರಸ್ತೆ ಇರುವುದಿಲ್ಲ ಎಂದರೆ ಸರಿ. ಸ್ಥಳ ಪಂಚನಾಮೆ ಮಾಡಿದ ಸಮಯದಲ್ಲಿ ಜಮೀನಿನಲ್ಲಿ ಉಳುಮೆ ಮಾಡಿರಲಿಲ್ಲ ಎಂದರೆ ಸರಿ. ಜಮೀನಿನಲ್ಲಿ ಯಾವ ಬೆಳೆ ಕಟಾವು ಆಗಿತ್ತು ಎಂದು ನನಗೆ ಗೊತ್ತಿಲ್ಲ. ಸಾಮಾನ್ಯವಾಗಿ ಜಮೀನಿನಲ್ಲಿ ಜೋಳದ ಬೆಳೆ ಬೆಳೆದಾಗ ಜೋಳದ ಬೆಳೆಯ ಸಾಲಿನಲ್ಲಿ ಒಂದು ಕಡೆ ಉಬ್ಬು ಇರುತ್ತದೆ ಮತ್ತು ಒಂದು ಕಡೆ ತಗ್ಗು ಇರುತ್ತದೆ ಎಂದರೆ ಸಾಕ್ಷಿ ಇರಬಹುದು ಎಂದು ಹೇಳುತ್ತಾರೆ. ಸಾಮಾನ್ಯವಾಗಿ ಟ್ರಾಕ್ಟರ್ ನ ಟ್ರೈಲರ್ ನಲ್ಲಿ ಲೋಡ್ ಜಾಸ್ತಿ ಇದ್ದಾಗ ಟ್ರಾಕ್ಟರ್ ಜೋಳದ ಬೆಳೆಯ ಜಮೀನಿನಲ್ಲಿ ಹೋಗಬೇಕಾದರೆ ಉಬ್ಬು ತಗ್ಗು ಇರುವುದರಿಂದ ಟ್ರಾಕ್ಟರ್ ಜೋಲಿ ಹೊಡೆಯುವ ಸಾಧ್ಯತೆ ಇರುತ್ತದೆ ಎಂದರೆ ಸರಿ. ಆರೋಪಿ ಚಾಸಾ1 ರವರ ಮನೆಗೆ ಕೂಲಿ ಕೆಲಸಕ್ಕೆ ಹೋಗುತ್ತಿದ್ದ ಎಂದರೆ ಸರಿಯಲ್ಲ. ಆರೋಪಿ ಚಾಸ–1 ರವರ ಮನೆಗೆ ಕೂಲಿ ಕೆಲಸಕ್ಕೆ ಹೋಗುತ್ತಿದ್ದ ವಿಚಾರ ನನ್ನ ತನಿಖೆಯ ಸಮಯದಲ್ಲಿ ನನಗೇ ಕಂಡುಬಂದಿದ್ದರೂ ಸಹ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ1 ರವರು ಆರೋಪಿಗೆ ಸರಿಯಾಗಿ ಕೂಲಿ ಕೊಡದ ಕಾರಣ ಆರೋಪಿ

ಚಾಸಾ1 ರವ ರ ಮನೆಗೆ ಕೂಲಿಗೆ ಹೋಗುವುದನ್ನು ಬಿಟ್ಟ, ಆ ಕಾರಣದಿಂದ ಚಾಸಾ1 ರವರಿಗೆ ಆರೋಪಿ ಮೇಲೆ ದ್ವೇಷ ಇತ್ತು ಎಂದರೆ ಸರಿಯಲ್ಲ. ಚಾಸ 2 ರವರಿಗೆ ಟ್ರಾಕ್ಟರ್ ಚಾಲನೆ ಮಾಡಲು ಪರವಾನಿಗೆ ಇರಲಿಲ್ಲ ಮತ್ತು ತರಭೇತಿ ಇರದ ಕಾರಣ ಟ್ರಾಕ್ಟರ್ ಚಾಲನೆ ಮಾಡುವಾಗ ಟ್ರಾಕ್ಟರ್ ಇಂಜಿನ್ ಮೇಲೆ ಎದ್ದು , ಚಾಸಾ2 ರವರು ಕೆಳಗೆ ಬಿದ್ದು ಗಾಯ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವಿಚಾರ ನನಗೆ ಗೊತ್ತಿದ್ದರೂ ಸಹ ನಾನು ಚಸಾ2 ರವರ ಜೊತೆ ಕೈ ಜೋಡಿಸಿ ಆರೋಪಿ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪ್ರ.ವ.ವರದಿ ದಾಖಲಾದ ಮೇಲೆ ಠಾಣೆಗೆ ಹೋಗಿರಲಿಲ್ಲ ಎಂದರೆ ಸರಿಯಲ್ಲ.

ನಿಪಿ 6 ಭಾವಚಿತ್ರದಲ್ಲಿ ಬೆಳೆ ಇರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಕೃತ್ಯ ನಡೆದ ಸ್ಥಳದಲ್ಲಿ, ಅಮಾನತ್ತು ಪಂಚನಾಮೆ ಮಾಡಿದ ಸ್ಥಳದಲ್ಲಿ ಬೆಳೆ ಕಟಾವು ಆಗಿರುತ್ತದೆ ಎಂದು ಹೇಳುತ್ತಾರೆ. ಅಮಾನತ್ತು ಮಾಡಿದ ಸ್ಥಳ, ಸ್ಥಳ ಪಂಚನಾಮೆ ಮಾಡಿದ ಸ್ಥಳಕ್ಕೂ ಮತ್ತು ಚಾಸಾ1 ರವರ ಜಮೀನಿಗೂ ಎಷ್ಟು ದೂರ ಇರುತ್ತದೆ ಎಂದು ಮಹಜರ್ ದಾಖಲೆಯಲ್ಲಿ ಬರೆದಿರುತ್ತೀರಾ ಎಂದರೆ ಸಾಕ್ಷಿ ಬರೆದಿರುವುದಿಲ್ಲ ಎಂದು ಹೇಳುತ್ತಾರೆ. ಜಮೀನಿಗೆ ಸಂಬಂಧಪಟ್ಟ ಆರ್ ಟಿ ಸಿ ಗಳನ್ನು ನನ್ನ ಮುಂದಿನ ತನಿಖಾಧಿಕಾರಿಗಳು

ಪಡೆದುಕೊಂಡಿರುತ್ತಾರೆ. ನನ್ನ ತನಿಖಾ ಕಾಲದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ನನ್ನ ಮುಂದೆ ಯಾವುದೇ ಸ್ವ – ಇಚ್ಛಾ ಹೇಳಿಕೆಯನ್ನು ಕೊಟ್ಟಿರುವುದಿಲ್ಲ, ಅದನ್ನು ನಾನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಚಾಸಾ1 ರವರು ಹೇಳಿದ ರೀತಿ ಯಾವುದೇ ಘಟನೆ ನಡೆಯದಿದ್ದರೂ ಸಹ ನಾನು ಚಾಸಾ1 ರವರ ಮಾತನ್ನು ಕೇಳಿಕೊಂಡು ಸುಳ್ಳು ತನಿಖೆಯನ್ನು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಮು ಮಾ –1 ಕ್ಕೂ ಮತ್ತು ಆರೋಪಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯ ಪ್ರಕಾರ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಣಗೊಳಿಸಲಾಯಿತು)

ಓ ಹೇ ಕೇ ಸ ಇದೆ

5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಶಿವಮೊಗ್ಗ (ಪೀಠಾಸೀನ, ಸಾಗರ).